# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ 2019ನೇ ಸಾಲಿನ ವಾರ್ಷಿಕ ಕ್ರೀಡಾ ಕೂಟಗಳನ್ನು ನಡೆಸಲು ಹಾಗೂ 2019-20ನೇ ಸಾಲಿನ ಇಲಾಖೆಯ ಕ್ರೀಡಾ ಚಟುವಟಿಕೆ ಮತ್ತು ಕ್ರೀಡಾಭಿವೃದ್ಧಿಗಾಗಿ ತಗಲುವ ವೆಚ್ಚವನ್ನು ಭರಿಸಲು ರೂ.48,30,169/- ಲಕ್ಷಗಳಿಗೆ ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ ಆದೇಶ.

ಓದಲಾಗಿದೆ: ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: 06/ಕ್ರೀಡೆ/2018-19/ಬಿಯುಡಿ -1/42/2019-20, ದಿನಾಂಕ: 11.02.2020.

ಪ್ರಸ್ತಾವನೆ:

ಮೇಲೆ ಓದಲಾದ ಡಿಜಿ & ಐಜಿಪಿ ರವರು ಪತ್ರದಲ್ಲಿ 2019-20ನೇ ಸಾಲಿನ ರಾಜ್ಯ ಪೊಲೀಸ್ ಇಲಾಖೆಯ ಕ್ರೀಡಾಭಿವೃದ್ಧಿ ಕ್ರೀಡಾಚಟುವಟಿಕೆಗಳು ಹಾಗೂ ಪ್ರಸ್ತುತ ಆರ್ಥಿಕ ವರ್ಷದ ಅವಧಿಯಲ್ಲಿ ಬೇರೆ ಬೇರೆ ರಾಜ್ಯ ಮತ್ತು ಕೇಂದ್ರ ಪೊಲೀಸ್ ಸಂಘಟನೆಗಳು ಆಯೋಜಿಸುವ ಅಖಿಲ ಭಾರತ ಪೊಲೀಸ್ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ರಾಜ್ಯ ಪೊಲೀಸ್ ಕ್ರೀಡಾ ತಂಡದ ಪೊಲೀಸ್ ಕ್ರೀಡಾಪಟುಗಳಿಗೆ ಅಗತ್ಯವಾಗಿ ಬೇಕಾದ ಕ್ರೀಡಾ ಸಾಮಾಗ್ರಿ, ಕ್ರೀಡಾ ಸಮವಸ್ತ್ರ ಹಾಗೂ ಕ್ರೀಡಾ ಸಲಕರಣೆ ಒದಗಿಸಲು ಮತ್ತು ಮತ್ತಿತರೆ ವೆಚ್ಚಗಳನ್ನು ಭರಿಸುವುದು ಸೇರಿದಂತೆ ಆಗಲಿರುವ ಒಂದು ಅಂದಾಜು ವೆಚ್ಚದ ವಿವರ ಈ ಕೆಳಕಂಡಂತೆ ಒದಗಿಸಿರುತ್ತಾರೆ.

| | | |
|---|---|---|
| 1. | ನಗರ ಪೊಲೀಸ್ ಕಮೀಷನರೇಟ್‌ಗಳಿಗೆ, ಎಲ್ಲಾ ಜಿಲ್ಲೆಗಳಿಗೆ ಹಾಗೂ ಘಟಕಗಳಿಗೆ ವಾರ್ಷಿಕ ಕ್ರೀಡಾಕೂಟ ನಡೆಸಲು ಬಿಡುಗಡೆ ಮಾಡಲು ಅಗತ್ಯವಿರುವ ಅಂದಾಜು ಅನುದಾನದ ಮೊತ್ತ. | ರೂ. 15,29,000=00 |
| 2. | ಬೆಂಗಳೂರಿನಲ್ಲಿ ರಾಜ್ಯಮಟ್ಟದ ವಾರ್ಷಿಕ ಕ್ರೀಡಾಕೂಟ ನಡೆಸಲು ತಗಲಬಹುದಾದ ಅಂದಾಜು ವೆಚ್ಚ. | ರೂ. 19,01,169=00 |
| 3. | 2018-19ನೇ ಸಾಲಿನ ಇಲಾಖೆಯ ಕ್ರೀಡಾ ಚಟುವಟಿಕೆಗಳು/ಅಭಿವೃದ್ಧಿಗಾಗಿ ತಗಲಬಹುದಾದ ಅಂದಾಜು ವೆಚ್ಚ ಮತ್ತು ಅಖಿಲ ಭಾರತ ಪೊಲೀಸ್ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ರಾಜ್ಯ ಪೊಲೀಸ್ ಕ್ರೀಡಾ ತಂಡದ ಸದಸ್ಯರಿಗೆ ಅಗತ್ಯವಾದ ಕ್ರೀಡಾ ಸಾಮಾಗ್ರಿ ಮತ್ತಿತರೆ ಭಾಗವಹಿಸುವ ಸಂಬಂಧ ತಗಲುವ ವೆಚ್ಚ ಭರಿಸಲು | ರೂ. 14,00,000=00 |
| | | **ರೂ. 48,30,169=00** |

ಮೇಲೆ ಓದಲಾದ ದಿನಾಂಕ 11.02.2020ರ ಪತ್ರದಲ್ಲಿ 2019-20ನೇ ಸಾಲಿನ ಇಲಾಖೆಯ ಕ್ರೀಡಾ ಚಟುವಟಿಕೆ ಮತ್ತು ಕ್ರೀಡಾಭಿವೃದ್ಧಿಗಾಗಿ ತಗಲುವ ವೆಚ್ಚವನ್ನು ಭರಿಸಲು ಲೆಕ್ಕಶೀರ್ಷಿಕೆ 2055-00-001-0-01-103 ಸಹಾಯನುದಾನ ಸಾಮಾನ್ಯ ಅಡಿಯಲ್ಲಿ ರೂ.48.31 ಲಕ್ಷಗಳ ವೆಚ್ಚವನ್ನು ಭರಿಸಲು ತಗಲುವ ಅನುದಾನ ಲಭ್ಯವಿಲ್ಲದಿದ್ದರಿಂದ 2019-20ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2055-00-109-1-01-051 ಸಾಮಾನ್ಯ ವೆಚ್ಚ ಅಡಿಯಲ್ಲಿ ಉಳಿತಾಯವಾಗುಬಹುದಾದ ಅನುದಾನದಿಂದ ಒಟ್ಟು ರೂ.122.65 ಲಕ್ಷಗಳನ್ನು ಪುನರ್ ವಿನಿಯೋಗಿಸಿಕೊಳ್ಳಲು ಮಂಜೂರಾತಿ ಕೋರಿರುತ್ತಾರೆ.

-2

Scanned with CamScanner

ಮೇಲ್ಕಂಡ ಅನುದಾನವನ್ನು ಲೆಕ್ಕಶೀರ್ಷಿಕೆ 2055-00-109-1-01-051 ಸಾಮಾನ್ಯ ವೆಚ್ಚ ಅಡಿಯಲ್ಲಿ ಉಳಿತಾಯವಾಗಬಹುದಾದ ಅನುದಾನದಿಂದ ರೂ.122.65 ಲಕ್ಷಗಳನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ 314 ಬಿಆರ್ ಎಸ್ 2019, ದಿನಾಂಕ 02.03.2020ರಲ್ಲಿ ಪುನರ್ವಿನಿಯೋಗ ಮಾಡಿಕೊಳ್ಳಲು ಮಂಜೂರಾತಿ ನೀಡಿ ಆದೇಶಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 80 ಇಎಫ್ಎಸ್ 2019, ಬೆಂಗಳೂರು,**

**ದಿನಾಂಕ: 13/ಮಾರ್ಚ್/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2019ನೇ ಸಾಲಿನ ವಾರ್ಷಿಕ ಕ್ರೀಡಾ ಕೂಟಗಳನ್ನು ನಡೆಸಲು ಹಾಗೂ 2019-20ನೇ ಸಾಲಿನ ಇಲಾಖೆಯ ಕ್ರೀಡಾ ಚಟುವಟಿಕೆ ಮತ್ತು ಕ್ರೀಡಾಭಿವೃದ್ಧಿಗಾಗಿ ತಗಲುವ ವೆಚ್ಚವನ್ನು ಭರಿಸಲು ರೂ.48,30,169/- ಗಳಿಗೆ (ನಲವತ್ತೆಂಟು ಲಕ್ಷ ಮೂವತ್ತು ಸಾವಿರದ ಒಂದು ನೂರ ಅರವತ್ತೊಂಬತ್ತು ಮಾತ್ರ) ಲಕ್ಷಗಳನ್ನು ಲೆಕ್ಕಶೀರ್ಷಿಕೆ 2055-00-109-1-01-051 ಸಾಮಾನ್ಯ ವೆಚ್ಚ ಅಡಿಯಲ್ಲಿ ಪುನರ್ವಿನಿಯೋಗ ಮಾಡಿಕೊಳ್ಳಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 108 ವೆಚ್ಚ-11/2020, ದಿನಾಂಕ: 02/03/2020 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

13/3/2020
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪ್ರತಿ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.



Scanned with CamScanner